# ಶಿಕ್ಷಕ : ಬದಲಾವಣೆಯ ಹರಿಕಾರ

ಸ್ವಾಮಿ ನಿಖಿಲೇಶ್ವರಾನಂದ

ಭಾರತದಲ್ಲಿ ಅತ್ಯುತ್ತಮ ನಿರ್ವಹಣಾಶಾಸ್ತ್ರದ ಅಧ್ಯಯನ ಸಂಸ್ಥೆಯೆಂದು ಪ್ರಖ್ಯಾತವಾದ ಅಹಮದಾಬಾದ್ ಮ್ಯಾನೇಜ್‌ಮೆಂಟ್ ಅಕ್ಯಾಡೆಮಿಯ ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಸ್ವಾಮಿ ನಿಖಿಲೇಶ್ವರಾನಂದಜಿ ಶಿಕ್ಷಕರನ್ನು ಕುರಿತ ಕೆಲವು ವಿಚಾರಗಳನ್ನು ಮಂಡಿಸಿದ್ದರು. ಗುಜರಾತಿನ ಪೋರ್‌ಬಂದರ್‌ನಲ್ಲಿರುವ ರಾಮಕೃಷ್ಣ ಮಿಷನ್ ಶಾಖೆಯ ಮುಖ್ಯಸ್ಥರಾಗಿರುವ ಇವರು ಪ್ರಸಿದ್ಧ ವಾಗ್ಮಿಗಳು, ಉತ್ತಮ ಚಿಂತಕರೂ ಕೂಡ. ಇಂಗ್ಲಿಷಿನಲ್ಲಿದ್ದ ಅವರ ಉಪನ್ಯಾಸವನ್ನು ಮ್ಯಾನೇಜ್‌ಮೆಂಟ್ ಅಕ್ಯಾಡೆಮಿಯು ಪ್ರಕಟಿಸಿದ್ದು ಅದರ ಕನ್ನಡಾನುವಾದವನ್ನು ಮೈಸೂರಿನ ಶ್ರೀ ಕೆ.ಆರ್. ಮೋಹನ್ ಮಾಡಿಕೊಟ್ಟಿರುತ್ತಾರೆ.




ಟೀಚರ್ (ಶಿಕ್ಷಕ, ಅಧ್ಯಾಪಕ, ಉಪಾಧ್ಯಾಯ, ಬೋಧಕ) ಎಂಬ ಇಂಗ್ಲಿಷ್ ಶಬ್ದಕ್ಕೆ ಸಂಸ್ಕೃತದಲ್ಲಿ ಸಂವಾದಿಯಾಗಿರುವುದು 'ಗುರು' ಎಂಬುದು. 'ಗು' ಅಂದರೆ ಕತ್ತಲೆ, 'ರು' ಎಂದರೆ ಹೋಗಲಾಡಿಸುವವನು. ಶಬ್ದವ್ಯುತ್ಪತ್ತಿಯ ಪ್ರಕಾರ ಗುರು ಎಂದರೆ ಕತ್ತಲೆಯನ್ನು ಹೋಗಲಾಡಿಸುವವನು. ಗುರು ಶಬ್ದಕ್ಕೆ ಪರಿವರ್ತನೆಯ ಹರಿಕಾರ ಎಂಬ ಶಬ್ದವು ಸರಿಹೊಂದುತ್ತದೆ. ಯಾರು ಅಜ್ಞಾನದ ನಿವಾರಣೆಯನ್ನು ಮಾಡುತ್ತಾನೋ, ಯಾರು ತನ್ನ ಶಿಷ್ಯನನ್ನು ಕತ್ತಲೆಯಿಂದ ಬೆಳಕಿನೆಡೆಗೆ ಹಾಗೂ ಅಜ್ಞಾನದಿಂದ ಜ್ಞಾನಕ್ಕೆ ಕರೆದುಕೊಂಡು ಹೋಗುತ್ತಾನೋ ಅವನೇ ಪರಿವರ್ತನೆಯ ಹರಿಕಾರ. ಮುಂಡಕೋಪನಿಷತ್ತಿನ ಪ್ರಕಾರ ಜ್ಞಾನವು ಎರಡು ವಿಧ—ಅಪರಾ ಹಾಗೂ ಪರಾ. ಯಾವುದು ನಮಗೆ ಈಗಾಗಲೇ ತಿಳಿದಿದೆಯೋ ಅದು ಅಪರಾ ಅಂದರೆ ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವವಿಜ್ಞಾನಶಾಸ್ತ್ರ, ಚರಿತ್ರೆ ಮುಂತಾದವು ಹಾಗೂ ವೇದ ಮತ್ತು ಶ್ರುತಿಗಳು. ಪರಾವಿದ್ಯೆ ಎಂದರೆ ಆತ್ಮಜ್ಞಾನ ಅಥವಾ ಪಾರಮಾರ್ಥಿಕ ಜ್ಞಾನ. ದೌರ್ಭಾಗ್ಯವೆಂದರೆ ಅಪರಾ ವಿದ್ಯೆ ನಮ್ಮ ಹತ್ತಿರವಿದೆ; ಪ್ರಪಂಚದ ಬಗೆಗಿನ ಜ್ಞಾನವಿದ್ದರೂ ನಮಗೆ ಒಳಗಿನದೇ ಆದ ಆತ್ಮಜ್ಞಾನವಿಲ್ಲ.

ಹಿಂದಿನ ಗುರುಕುಲಗಳಲ್ಲಿ ಈ ಎರಡು ವಿದ್ಯೆಗಳನ್ನೂ ಜೊತೆಯಾಗಿ ಬೋಧಿಸುತ್ತಿದ್ದರು. ಆದರೆ ಈಗ ಪರಾವಿದ್ಯೆಗೆ ಪ್ರಾಶಸ್ತ್ಯ ಕೊಡದೆ ಅಪರಾ ವಿದ್ಯೆಯನ್ನು ಮಾತ್ರ ಬೋಧಿಸಲಾಗುತ್ತಿದೆ. ಆತ್ಮದ ಅಭಿವ್ಯಕ್ತಿ ಹಾಗೂ ಸ್ವಾರ್ಥವನ್ನು ಜಯಿಸುವ ವಿಚಾರಗಳನ್ನು ಪೂರ್ತಿ ಕಡೆಗಣಿಸಿದ್ದಾರೆ. ಅಜ್ಞಾನ, ಅಂಧಕಾರಗಳನ್ನು ಹೋಗಲಾಡಿಸಿ ಆತ್ಮಜ್ಞಾನದ ಮೂಲಕ ದಿವ್ಯ ಜ್ಯೋತಿಯನ್ನು ಬೆಳಗಿಸುವ 'ಗುರು' ಶಬ್ದವನ್ನು ಕೀಳು ಅರ್ಥದಲ್ಲಿ ಇವತ್ತು ಉಪಯೋಗಿಸುತ್ತಿದ್ದಾರೆ. ಮ್ಯಾನೇಜ್‌ಮೆಂಟ್ ಗುರು, ಕರಾಟೆ ಗುರು, ಟ್ಯೂಷನ್ ಗುರು ಮುಂತಾದುವು ಇದಕ್ಕೆ ಉದಾಹರಣೆಗಳು.

'ಸಚ್ಚಿದಾನಂದ' ಒಬ್ಬನೇ ಗುರುವಾಗಲು ಸಾಧ್ಯ ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಪರಮಾತ್ಮನು ಜ್ಞಾನವನ್ನು ಎರಡು ವಿಧಗಳಲ್ಲಿ ಕೊಡುತ್ತಾನೆ. ವೈಯಕ್ತಿಕ ಸ್ತರದಲ್ಲಿ ಅಂತರಿಕ ಸ್ಫೂರ್ತಿಯನ್ನು ಕೊಡುತ್ತಾನೆ. ಬೃಹತ್ ಸ್ತರದಲ್ಲಿ ಭಗವಂತನೇ ಕೆಲವೊಮ್ಮೆ ಮಾರ್ಗದರ್ಶನ ನೀಡಲು ಅವತಾರ ರೂಪದಲ್ಲಿ ಬರುತ್ತಾನೆ. ಶ್ರೀರಾಮ, ಶ್ರೀಕೃಷ್ಣ, ಏಸುಕ್ರಿಸ್ತ, ಬುದ್ಧ ಮಹಾವೀರ, ಆಚಾರ್ಯ ಶಂಕರ ಪ್ರಮುಖ ಅವತಾರಿಗಳು. ಪ್ರಾಪಂಚಿಕತೆ, ಗ್ರಾಹಕಯುಗದ ಮನೋಭಾವ, ಮೂಲಭೂತವಾದಗಳಿಂದ ಉಂಟಾಗಿರುವ ರಾಕ್ಷಸಶಕ್ತಿಗಳನ್ನು ನಿರ್ಮೂಲಮಾಡಲು ಶ್ರೀರಾಮಕೃಷ್ಣರು ಅವತಾರವೆತ್ತಿದರು. ಅವರ ಜೊತೆ ಮಹಾಮಾತೆ ಶ್ರೀಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರೂ ಅವತರಿಸಿದರು.

ಮನುಕುಲಕ್ಕೆ ಈ ಅವತಾರಿಗಳು ಬಹಳ ದೊಡ್ಡ ಶಿಕ್ಷಕರು. ಎರಡನೆ ಸ್ತರದ ಶಿಕ್ಷಕರಲ್ಲಿ ನಾವು ಗುರುನಾನಕ್, ಪೈಗಂಬರ್ ಮುಂತಾದ ದೇವದೂತರನ್ನು ಮತ್ತು ಪ್ರವಾದಿಗಳನ್ನು ಕಾಣುತ್ತೇವೆ. ಇವರು ದೇವರ ಸಂದೇಶವನ್ನು ಸಾರುತ್ತ ಮಾರ್ಗದರ್ಶನ ಮಾಡುವವರು. ಮೂರನೆಯ ಸ್ತರದಲ್ಲಿ ಕಬೀರ್, ಮೀರಾ, ನರಸೀ ಮೆಹತಾ ಮುಂತಾದ ಸಂತರಿದ್ದಾರೆ, ಸಾಧನೆ ಮಾಡಿ ಆತ್ಮಸಾಕ್ಷಾತ್ಕಾರ ಮಾಡಿಕೊಂಡ ಅನುಭಾವಿಗಳಿದ್ದಾರೆ. ಅವರು ಗುರುಗಳಾಗಿ ಅಧ್ಯಾತ್ಮ, ಧ್ಯಾನವನ್ನು ಬೋಧಿಸುತ್ತಾರೆ. ಅನಂತರದಲ್ಲಿ ವೃತ್ತಿಯಲ್ಲಿ ಶಿಕ್ಷಕರಾಗಿರುವವರು ಲೌಕಿಕ ಜ್ಞಾನವನ್ನು ಕೊಡುತ್ತಾರೆ. ಶಾಲೆ ಹಾಗೂ ಇತರ ವಿದ್ಯಾಸಂಸ್ಥೆಗಳಲ್ಲಿ ಶಿಕ್ಷಕ ವೃತ್ತಿಯಲ್ಲಿರುವವರನ್ನು ಈಗ ಗುರುಗಳೆಂದು ಕರೆಯುತ್ತೇವೆ. ಮೇಲೆ ಹೇಳಿದ ಅಧ್ಯಾತ್ಮ

ಗುರುಗಳು ಇಡೀ ಪ್ರಪಂಚವನ್ನೇ ಪರಿವರ್ತಿಸುತ್ತಾರೆ. ಆದರೆ ಸಾಮಾನ್ಯ ಶಿಕ್ಷಕರು ಪರಿವರ್ತನೆಯ ಹರಿಕಾರರಾಗಲು ಸಾಧ್ಯವೆ? ಇದಕ್ಕಾಗಿ ಯಾವ ಬದಲಾವಣೆ ಆಗಬೇಕು? ಈ ಬದಲಾವಣೆಯು ಅಗತ್ಯವೆ?

**ಈಗಿನ ಪರಿಸ್ಥಿತಿ – ಆಧ್ಯಾತ್ಮಿಕ ಸಂಸ್ಕೃತಿ ಅತ್ಯಗತ್ಯ**

ಮಾನಸಿಕ ಶಾಂತಿಯ ಅಭಾವ ಈಗ ಪ್ರಪಂಚದಲ್ಲಿ ಎಲ್ಲಾ ಕಡೆ ವ್ಯಾಪಿಸಿದೆ. ಯುನೆಸ್ಕೊ (UNESCO)ಇದರ ಬಗ್ಗೆ ಬಹಳ ಆತಂಕಗೊಂಡಿದೆ. ಈ ಸಂಸ್ಥೆಯು 'ಮಾಡುವ ವಿದ್ಯೆ'ಗಿಂತ 'ಆಗುವ ವಿದ್ಯೆ' ನೀಡಬೇಕೆಂದು ಆದೇಶ ಕೊಟ್ಟಿತ್ತು. ಏಕೆಂದರೆ, ಇಂದು ಬಹಳಷ್ಟು ಯುವಕ ಯುವತಿಯರು ಮಾದಕದ್ರವ್ಯಗಳ ವ್ಯಸನಿಗಳಾಗಿದ್ದಾರೆ, ಅಥವಾ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದಲ್ಲದೆ ಏಡ್ಸ್‌ನಂತಹ ಮಹಾಮಾರಿ ಸಾಂಕ್ರಾಮಿಕ ರೋಗಗಳಿಗೂ ತುತ್ತಾಗುತ್ತಿದ್ದಾರೆ. ಅಮೆರಿಕದಲ್ಲಿ ಬಹಳ ಮಾರಾಟವಾದ ಪುಸ್ತಕ "ಅಂತಿಮ ನಿರ್ಗಮನ" (*The Final Exit*) ದಲ್ಲಿ ಡೆರಿಕ್ ಹಂಫ್ರಿಯವರು ಹೇಗೆ ಆತ್ಮಹತ್ಯೆ ಮಾಡಿಕೊಳ್ಳಬಹುದೆಂಬ ಬಗ್ಗೆ ಮಾರ್ಗದರ್ಶನ ಕೊಟ್ಟಿದ್ದಾರೆ. ಇದಲ್ಲದೆ "ಆತ್ಮಹತ್ಯೆ ಹೇಗೆ ಮಾಡಿಕೊಳ್ಳಬೇಕು? ಒಂದು ಸಂಪೂರ್ಣ ಕೈಪಿಡಿ" ಎಂಬ ಪುಸ್ತಕ ಜಪಾನಿನಲ್ಲಿ ಒಂದು ವರ್ಷದಲ್ಲಿ ೩.೫ ಲಕ್ಷ ಪ್ರತಿಗಳು ಮಾರಾಟವಾಗಿ ಹಲವರು ಆ ಪುಸ್ತಕವನ್ನು ಕೈಯಲ್ಲಿ ಹಿಡಿದುಕೊಂಡೇ ಆತ್ಮಹತ್ಯೆ ಮಾಡಿಕೊಂಡರು. "ಆತ್ಮಹತ್ಯೆ–ಉಪಯೋಗಿಗಳ ಕೈಪಿಡಿ" ಎಂಬ ಪುಸ್ತಕವು ಫ್ರಾನ್ಸ್ ದೇಶದಲ್ಲಿ ಬಹಳ ಮಾರಾಟವಾಯಿತು. ನಿರುದ್ಯೋಗ, ಬಡತನ ಮುಂತಾದ ತೊಂದರೆಗಳು ನಮ್ಮ ದೇಶದಲ್ಲಿ ಇವೆಯಾದರೂ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಆಗುತ್ತಿರುವ ಆತ್ಮಹತ್ಯೆಯ ಪ್ರಮಾಣಕ್ಕೆ ಹೋಲಿಸಿದರೆ ನಮ್ಮಲ್ಲಿ ಅಷ್ಟು ಇಲ್ಲ. H ಎಂದರೆ happiness ಸಂತೋಷ M ಅಂದರೆ money ಹಣ. ಹೆಚ್ಚು ಎಂ (ಹಣ) ಇದ್ದರೆ ಅದು ಹೆಚ್ಚು ಹೆಚ್ (ಸಂತೋಷ) ಎಂಬ ನಂಬಿಕೆ ಈಗಿನವರಿಗಿದೆ. ಆದರೆ ಅಂಕಿಅಂಶಗಳನ್ನು ಪರಿಶೀಲಿಸಿದರೆ, ಇದರ ವಿರುದ್ಧ ಸ್ಥಿತಿಯನ್ನು ಸೂಚಿಸುತ್ತದೆ. ಅಮೆರಿಕ, ಜಪಾನ್, ಸ್ವೀಡನ್ ಮುಂತಾದ ಅಭಿವೃದ್ಧಿಹೊಂದಿದ ದೇಶಗಳಲ್ಲಿ ತಲಾ ಒಂದರಂತೆ (per capita) ವರಮಾನ ಹೆಚ್ಚು ಇದೆ. ಆದರೆ ಆತ್ಮಹತ್ಯೆಗಳ ಪ್ರಮಾಣದಲ್ಲಿ ಈ ದೇಶಗಳು ಮೇಲಿನ ಸ್ಥಾನದಲ್ಲಿ ಇವೆ. ಈ ದೇಶಗಳಲ್ಲಿ ಮಾನಸಿಕ ಅಸ್ವಸ್ಥ ಜನರು ಬಹಳ ಇದ್ದಾರೆ. ಹಣವೊಂದರಿಂದಲೇ ನಮ್ಮ ಸಮಸ್ಯೆಗಳು ನಿವಾರಣೆಯಾಗುವುದಿಲ್ಲವೆಂಬುದರ ಸ್ಪಷ್ಟ ಚಿತ್ರಣವನ್ನು ಕೆಲವು ಅಂಕಿಅಂಶಗಳು ಕೊಡುತ್ತವೆ:

ಯುನೆಸ್ಕೊ ವರದಿಯ ಪ್ರಕಾರ ಅಮೆರಿಕ, ಜಪಾನ್ ಸ್ವೀಡನ್ ದೇಶಗಳಲ್ಲಿ ಶೇ. ೫೪ರಷ್ಟು ಯುವಜನರ ಸಾವಿಗೆ ಆತ್ಮಹತ್ಯೆಯೇ ಕಾರಣ. ೪೨ ವರ್ಷ ವಯಸ್ಸಿನ ಮತ್ತು ಅದಕ್ಕೆ ಮೇಲ್ಪಟ್ಟ ಹಿರಿಯ ಅಧಿಕಾರಿಗಳಲ್ಲಿ ಶೇ.೪೪ರಷ್ಟು ಜನ ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದಾರೆ ಎಂದು ಜಪಾನಿನ ಆರೋಗ್ಯ ಮಂತ್ರಾಲಯ ತಿಳಿಸಿದೆ. ಇಂಗ್ಲೆಂಡ್ ದೇಶದಲ್ಲಿ ಎಳೆವಯಸ್ಸಿನ, ಸಾಮಾನ್ಯ ಹುಡುಗ ಅಥವಾ ಹುಡುಗಿ ಉನ್ನತ ವಿದ್ಯಾಶಾಲೆಯನ್ನು ಸೇರುವುದಕ್ಕಿಂತ ಮಾನಸಿಕ ಆಸ್ಪತ್ರೆಯನ್ನು ಸೇರುವ ಸಾಧ್ಯತೆ ಹತ್ತು ಪಟ್ಟು ಎಂದು ವಿಜ್ಞಾನಿ ಡಾ. ಆರ್.ಡಿ. ಲೈಂಗ್ ಅಭಿಪ್ರಾಯಪಟ್ಟಿದ್ದಾರೆ.

ಇಂತಹ ಪರಿಸ್ಥಿತಿಯಲ್ಲಿ ಶಿಕ್ಷಕರ ಪಾತ್ರವೇನು ಮತ್ತು ವಿದ್ಯಾಭ್ಯಾಸದಲ್ಲಿ ಏನು ಬದಲಾವಣೆ ಮಾಡಬೇಕೆಂದು ನಾವು ಯೋಚಿಸಬೇಕಾಗಿದೆ. ಪ್ರಚಲಿತ ವಿದ್ಯಾಕ್ರಮಕ್ಕಿಂತ ತೀರ ಭಿನ್ನವಾದ ವಿಚಾರಧಾರೆ ಮತ್ತು ಮಾದರಿಯೊಂದರ ಅಗತ್ಯವಿದೆ. ಮೌಲ್ಯಾಧಾರಿತ ವಿದ್ಯಾಕ್ರಮಕ್ಕೆ ಅತಿ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು. ಅಧ್ಯಾತ್ಮ ಸಂಸ್ಕೃತಿಯನ್ನು ನಾವು ಈಗ ಅನುಸರಿಸಿ ಪೋಷಿಸದೆ ಇದ್ದರೆ ಇನ್ನು ಮೂರು ತಲೆಮಾರುಗಳಲ್ಲಿ ನಮ್ಮ ಜನಾಂಗವೇ ನಿರ್ನಾಮವಾಗುತ್ತದೆ ಎಂದು ಸ್ವಾಮಿ ವಿವೇಕಾನಂದರು ಎಚ್ಚರಿಕೆಯನ್ನು ನೀಡಿದ್ದರು.

**ಅಧ್ಯಾತ್ಮ ಸಂಸ್ಕೃತಿ** : ಇದೇ ವಿಶ್ವಕ್ಕೆ ಭಾರತದ ಕೊಡುಗೆ. ತನ್ನ ಅಧ್ಯಾತ್ಮ ಶಕ್ತಿಯಿಂದ ಭಾರತವು ಇಡೀ ವಿಶ್ವವನ್ನೇ ಗೆಲ್ಲುತ್ತದೆ ಎಂಬ ವಿವೇಕಾನಂದರ ನುಡಿ ಇಂದು ಬಹಳ ಪ್ರಸ್ತುತ. "ನೀವು ಸಂನ್ಯಾಸಿಯಾಗಿ ರಾಷ್ಟ್ರೀಯ ಭಾವನೆಯಿಂದ ಮೇಲಿರಬೇಕು. ಹಾಗಿರುವಾಗ ಭಾರತದ ಬಗ್ಗೆ, ದೇಶಪ್ರೇಮದ ಬಗ್ಗೆ ಯಾಕೆ ಬಹಳ ಮಾತನಾಡುತ್ತೀರಿ?" ಎಂದು ಯಾರೋ ವಿವೇಕಾನಂದರನ್ನು ಕೇಳಿದರು. ಇದಕ್ಕೆ ಉತ್ತರವಾಗಿ "ನನಗೆ ಎಲ್ಲಾ ದೇಶಗಳು ಸರಿಸಮಾನ. ಆದರೆ ಪ್ರಾಪಂಚಿಕತೆಯ ಸಂಸ್ಕೃತಿಯ ದವಡೆಯಿಂದ ಜಗತ್ತನ್ನು ಕಾಪಾಡಬೇಕಾಗಿದೆ. ಭಾರತಕ್ಕೆ ಅಧ್ಯಾತ್ಮ ಸಂಸ್ಕೃತಿಯನ್ನು ಪ್ರಸಾರಮಾಡುವ ವಿಶೇಷ ಪಾತ್ರವಿದೆ. ಭಾರತ ಉಳಿದರೆ ಮಾತ್ರ ಜಗತ್ತಿನಲ್ಲಿ ಅಧ್ಯಾತ್ಮ ಉಳಿಯುತ್ತದೆ. ಭಾರತದ ಆಧ್ಯಾತ್ಮಿಕ ಸಂಪತ್ತನ್ನು ನಾವು ಜಗತ್ತಿಗೆ ಕೊಡಬೇಕಾಗಿದೆ. ಇಡೀ ಜಗತ್ತು ಇದಕ್ಕೋಸ್ಕರ ಕಾಯುತ್ತಿದೆ" ಎಂದು ವಿವೇಕಾನಂದರು ತಿಳಿಸಿದರು. ಹಾಗೆ ನೋಡಿದರೆ ಸ್ವಾಮಿಜಿ ನುಡಿದ ಅನೇಕ ಭವಿಷ್ಯವಾಣಿಗಳು ಸತ್ಯವಾಗಿವೆ. ಅವರು ಜ್ಯೋತಿಷಿಗಳಲ್ಲ, ಆದರೆ ಕ್ರಾಂತದರ್ಶಿಗಳು. ಇನ್ನು ೫೦ ವರ್ಷಗಳಲ್ಲಿ ಭಾರತವು ಅಸಾಧಾರಣ ಸಂದರ್ಭಗಳಿಂದಾಗಿ ಸ್ವತಂತ್ರವಾಗುತ್ತದೆ ಎಂದು ೧೮೯೭ರಲ್ಲಿಯೇ ನುಡಿದರು. ಆಗ ಗಾಂಧೀಜಿಯವರು ದಕ್ಷಿಣ ಆಫ್ರಿಕದಿಂದ ಭಾರತಕ್ಕೆ ಇನ್ನೂ ಬಂದಿರಲಿಲ್ಲ. ಅಸಹಕಾರ

ಆಂದೋಲನದ ಬಗ್ಗೆ ಯಾರೂ ಯೋಚನೆಯೇ ಮಾಡಿದ್ದಿಲ್ಲ. ನಿಖರವಾಗಿ ೫೦ ವರ್ಷಗಳು ಕಳೆದ ನಂತರ ನಮಗೆ ಸ್ವಾತಂತ್ರ್ಯ ಸಿಕ್ಕಿತು. ೧೮೯೩ರಲ್ಲಿ ಹಾರ್ವರ್ಡ್ ವಿಶ್ವವಿದ್ಯಾನಿಲಯದ ಪ್ರೊ. ಜಾನ್ ಹೆನ್ರಿ ರೈಟ್ ಅವರ ಮನೆಯಲ್ಲಿ ಬ್ರಿಟಿಷರು ಭಾರತವನ್ನು ಬಿಟ್ಟನಂತರ, ಚೀನಾದೇಶವು ಆಕ್ರಮಣ ಮಾಡುವ ಅಪಾಯವನ್ನು ಕುರಿತೂ ನುಡಿದಿದ್ದರು. ಆಗ ಬ್ರಿಟಿಷರು ಭಾರತವನ್ನು ಬಿಟ್ಟು ಹೋಗುತ್ತಾರೆ ಎಂಬುದನ್ನು ಕನಸಿನಲ್ಲಿಯೂ ಯಾರೂ ಎಣಿಸಿರಲಿಲ್ಲ. ಹಾಗಿರುವಾಗ ಚೀನಾ ಭಾರತವನ್ನು ಆಕ್ರಮಣ ಮಾಡುವ ವಿಚಾರ ಎಲ್ಲಿ ಬಂತು? ಆದರೆ ೧೯೬೨ರಲ್ಲಿ ಚೀನಾ ಆಕ್ರಮಣವನ್ನು ಮಾಡಿತು.

ಪ್ರಥಮ ಕಾರ್ಮಿಕ ಕ್ರಾಂತಿಯು ರಷ್ಯಾ ಅಥವಾ ಚೀನಾ ದೇಶಗಳಲ್ಲಿ ಆಗುತ್ತದೆ ಎಂದೂ ವಿವೇಕಾನಂದರು ಭವಿಷ್ಯ ನುಡಿದಿದ್ದರು. ಇದಕ್ಕೆಲ್ಲ ಕಾರಣನಾದ ಕಾರ್ಲ್ ಮಾರ್ಕ್ಸ್ ಪ್ರಥಮ ಕಾರ್ಮಿಕ ವಿಪ್ಲವವು ಜರ್ಮನಿಯಲ್ಲಿ ಆಗುತ್ತದೆ, ಏಕೆಂದರೆ ಅಲ್ಲಿ ಕಾರ್ಮಿಕರು ಸಂಘಟಿತರಾಗಿದ್ದಾರೆ ಎಂದೇ ನಂಬಿದ್ದ. ರಷ್ಯಾದಲ್ಲಿ ಕಾರ್ಮಿಕರು ಆಗ ಇನ್ನೂ ಸಂಘಟಿತ ರಾಗಿರಲಿಲ್ಲ. ಅದರೂ ಜಾಗತಿಕ ಮಟ್ಟದಲ್ಲಿ ಕಾರ್ಮಿಕ ಚಳವಳಿ ರಷ್ಯಾದಲ್ಲಿ ಪ್ರಾರಂಭವಾಗಿ ಸ್ವಾಮೀಜಿಯವರ ಭವಿಷ್ಯ ನಿಜವಾಯಿತು.

ಸ್ವಾಮಿಜಿ ನುಡಿದದ್ದೆಲ್ಲ ಬಹುತೇಕ ನಿಜವಾಗಿದೆ. ಆದರೆ ಒಂದು ಮಾತ್ರ ಇನ್ನೂ ಆಗಬೇಕಾಗಿದೆ. ೧೮೯೭ರಲ್ಲಿ ಚೆನ್ನೈನಲ್ಲಿ ಅವರು ಭಾಷಣ ಮಾಡುವಾಗ ಭಾರತವು ಅಧ್ಯಾತ್ಮ ಶಕ್ತಿಯಿಂದ ಜಗತ್ತನ್ನು ಜಯಿಸುತ್ತದೆ ಎಂದು ಹೇಳಿದ್ದು ನಿಜವಾಗಬೇಕಾಗಿದೆ. ಆದರೆ ಆ ದಿಸೆಯಲ್ಲಿ ಪ್ರಗತಿ ನಿಧಾನ ವಾಗಿ ಆಗುತ್ತಿದೆ. ಧ್ಯಾನ, ಯೋಗ ಮುಂತಾದ ಭಾರತೀಯ ಆಧ್ಯಾತ್ಮಿಕ ಸಾಧನೆಗಳತ್ತ ಜಗತ್ತು ಗಮನ ಹರಿಸುತ್ತಿದೆ. ಸುಪ್ರಸಿದ್ಧ 'ಟೈಮ್' ಪತ್ರಿಕೆಯ ಪ್ರಕಾರ ಅಮೆರಿಕದವರು ಧ್ಯಾನದ ಬಗ್ಗೆ ತಿಳಿಯಲು ವಿಪರೀತವಾಗಿ ಕಾತರರಾಗಿದ್ದಾರೆ. ೧೫ ಮಿಲಿಯನ್ ಅಮೆರಿಕನರು ಮನಶ್ಶಾಂತಿಗಾಗಿ ನಿಯಮಿತವಾಗಿ ಧ್ಯಾನ ಮಾಡುತ್ತಿದ್ದಾರೆ. ಹಾಗೆಯೇ ಯೋಗದ ಬಗ್ಗೆ ಬಹಳ ಉತ್ಸಾಹಿಗಳಾಗಿದ್ದಾರೆ. ಅಮೆರಿಕದ ೧೨೨ ವೈದ್ಯಕೀಯ ಶಾಲೆಗಳ ಪೈಕಿ ೯೨ ಶಾಲೆಗಳಲ್ಲಿ ಪರ್ಯಾಯ ಔಷಧಿ ಪದ್ಧತಿ, ಯೋಗ, ಧ್ಯಾನಗಳ ಬಗ್ಗೆ ತರಬೇತಿಗಳಿವೆ. ಹೀಗೆ ಭಾರತೀಯ ಪರಂಪರೆ ಹಾಗೂ ಆಧ್ಯಾತ್ಮಿಕತೆಗಳನ್ನು ಬೇರೆ ದೇಶದವರು ಅಳವಡಿಸಿಕೊಳ್ಳುತ್ತಿದ್ದಾರೆ. ಈಗ ಭಾರತವು ಪ್ರಗತಿಪರ ಲೋಕಗುರುವಿನ ಪಾತ್ರವನ್ನು ವಹಿಸಿ ಅಧ್ಯಾತ್ಮವನ್ನು ಜಗತ್ತಿಗೆ ಹಂಚಬೇಕಾದರೆ ನಮ್ಮ ರಾಷ್ಟ್ರದ ಈಗಿನ ಸ್ಥಿತಿ ಇದಕ್ಕೆ ಪ್ರತಿಬಂಧಕವಾಗಿದೆ. ನಾವು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗದೆ ನಮಗಿಂತ ಮುನ್ನಡೆ ಸಾಧಿಸಿರುವ ರಾಷ್ಟ್ರಗಳಿಗೆ ಬೋಧಕರಾಗಲು ಹೇಗೆ ಸಾಧ್ಯ? ಆದ್ದರಿಂದ ರಾಷ್ಟ್ರನಿರ್ಮಾಣ ಕಾರ್ಯದ ತುರ್ತು ಅಗತ್ಯವಿದೆ.

(ಮುಂದುವರಿಯುವುದು)

# ? ಕೇಳಿ ತಿಳಿಯಿರಿ ☆

ಈ ಬಾರಿ ಸಾಧಕರ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡಿರುವವರು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿರುವ ಸ್ವಾಮಿ ನಿತ್ಯಸ್ಥಾನಂದಜಿ. ಓದುಗರು ತಮ್ಮ ಆಧ್ಯಾತ್ಮಿಕ ಜೀವನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಸ್ಫುಟವಾಗಿ ಕೆಲವೇ ವಾಕ್ಯಗಳಲ್ಲಿ ಬರೆದು ಈ ಪತ್ರಿಕೆಯ ವಿಳಾಸಕ್ಕೆ ಕಳುಹಿಸಬಹುದು. **ಪ್ರಶ್ನೆಗಳು: ಶ್ರೀ ನವೀನ್, ಮೈಸೂರು.**

**? ಆಧ್ಯಾತ್ಮಿಕ ಜೀವನಕ್ಕೆ ಬೇಕಾದ ಪ್ರಮುಖ ಅರ್ಹತೆಗಳು ಯಾವುವು?**

☆ ಮೊದಲನೆಯ ಅರ್ಹತೆಯೇ ಮುಮುಕ್ಷುತ್ವ, ಆಧ್ಯಾತ್ಮಿಕ ಜೀವನವನ್ನು ನಡೆಸಬೇಕಾದರೆ ನಾನು ದೇವರನ್ನು ಕಾಣಬೇಕು ಎಂಬ ತೀವ್ರವಾದ ಹಂಬಲವಿರಬೇಕು. ಇದರಿಂದ ಪ್ರಾಪಂಚಿಕ ವಸ್ತುಗಳ ಮೇಲೆ ಸಹಜವಾಗಿಯೇ ವೈರಾಗ್ಯ ಮೂಡುತ್ತದೆ. ಆಧ್ಯಾತ್ಮಿಕ ಜೀವನವೆಂದರೆ ನಮ್ಮಲ್ಲೇ ಇರುವಂತಹ ಕಾಮ, ಕ್ರೋಧ, ಭಯ, ಮೋಹ, ಅಹಂಕಾರ ಹಾಗೂ ದ್ವೇಷಗಳ ವಿರುದ್ಧ ನಡೆಸುವ ದೀರ್ಘ ಕಾಲದ ಹೋರಾಟ. ಆದ್ದರಿಂದ ಜಯ ಸಾಧಿಸಲು ವ್ಯಕ್ತಿಗೆ ಅಗಾಧವಾದ ತಾಳ್ಮೆ ಹಾಗೂ ಛಲವಿರಬೇಕು. ಯಾವುದು ಒಳ್ಳೆಯದು ಯಾವುದು ಕೆಟ್ಟದ್ದು, ಯಾವುದು ಹಿತ ಯಾವುದು ಅಹಿತ, ಯಾವುದು ಆಧ್ಯಾತ್ಮಿಕ ಜೀವನಕ್ಕೆ ಯಾವುದು ಪೋಷಕವಾದುದು ಮತ್ತು ಯಾವುದು ಮಾರಕವಾದುದು ಎಂಬ ವಿವೇಚನೆ ಹಾಗೂ ಸ್ಪಷ್ಟವಾದ ತಿಳಿವಳಿಕೆ ಬಹಳ ಅವಶ್ಯಕ.

**? ಜೀವನದ ಗುರಿ ಏನು?**

☆ ವಿವೇಕಾನಂದರ ಮಾತಿನಲ್ಲಿ ಹೇಳುವುದಾದರೆ, "ವ್ಯಕ್ತಿಯಲ್ಲಿ ಅಡಗಿರುವ ದಿವ್ಯತೆಯನ್ನು ಪ್ರಕಾಶಗೊಳಿಸುವುದೇ ಜೀವನದ ಗುರಿ". ಹೀಗೆ ದಿವ್ಯತೆ ಪ್ರಕಾಶಗೊಂಡಾಗ ಮಾತ್ರ ನೈತಿಕತೆ, ಸ್ಥೈರ್ಯ ಮುಂತಾದುವು ಶೋಭಿಸುತ್ತವೆ.